ಕಥೆ

# ಬಂದೇ ಬರುತಾವ ಕಾಲ



**ಆಶಾ ರಘು**

ಕಲೆ: ರಾಮಕೃಷ್ಣ ಸಿದ್ರಪಾಲ

ಶಾರದಾ ಟೀಚರ್ ನಮ್ಮ ಮನೆ ಮುಂದಿನ ರಸ್ತೆಯಲ್ಲಿ ಕೋಲುಕೋಲಾಗಿ ಸೀರೆ ಸುತ್ತಿಕೊಂಡು ಟೀಚರ್ಸ್ ಟ್ರೈನಿಂಗಿಗೆ ಹೋಗುತ್ತಿದ್ದುದು ಇನ್ನೂ ನಿನ್ನೆ ಮೊನ್ನೆಯಂತಿದೆ. ಎಷ್ಟು ಬೇಗ ದಿನಗಳು ಸರಿದುಬಿಡುತ್ತವೆ. ನಾವು ಸುಮ್ಮನಿರುತ್ತೇವೆ ಅಂದರೆ ಕಾಲವೂ ಸುಮ್ಮನಿರುತ್ತದೆಯೇ? ಟ್ರೈನಿಂಗಿನ ಭಾಗವಾಗಿ ನಮ್ಮ ಸ್ಕೂಲಿಗೆ ಬಂದು, ಮುಕ್ಕಾಲು ಗಂಟೆ ಪಾಠ ಮಾಡಿ, ಕೊನೆಗೆ, 'ಬಂದೇ ಬರುತಾವ ಕಾಲ' ಅಂತ ಹಾಡು ಹಾಡಿ ಹೋಗಿದ್ದರಲ್ಲ. ಕೀಚಲು ದನಿ.ಆದರೆ ಕೇಳಲು ಹಿತವಾಗಿತ್ತು. ಕೇಳಲು ಅನ್ನುವುದಕ್ಕಿಂತ ನೋಡಲು ಅಂದರೆ ಸರಿಯೇನೋ! ಅವರ ಕಳೆಕಳೆಯಾದ ಸಾತ್ವಿಕ ಮುಖದ ದೆಸೆಯಿಂದ ದನಿ ಕೂಡಾ ಸಹ್ಯವಾಗಿತ್ತು. ಮನೆ ಮುಂದಿನ ಮೂಲೆ ಬಿಲ್ಡಿಂಗಿನ ಅಂಗಡಿಮನೆಯಲ್ಲೇ ತಂಗಿ, ತಮ್ಮ, ಅಮ್ಮಂದಿರೊಂದಿಗೆ ವಾಸವಾಗಿದ್ದರು. ಅಪ್ಪ ಅನ್ನಿಸಿಕೊಂಡವನು ಅವರಮ್ಮನನ್ನು ಬಿಟ್ಟಿದ್ದ. ಆದರೆ ಆಗಾಗ ಬಂದು ಏನಾದರೂ ತರಲೆ ತೆಗೆದು ಜಗಳವಾಡಿ ಹೋಗುತ್ತಿದ್ದ.

ಒಂದು ರಜೆಯ ದಿನ ಮಧ್ಯಾಹ್ನ ನಾನು ಮಲಗಿರುವ ಹೊತ್ತಿನಲ್ಲಿ ಯಾರೋ ಕಿರುಚಾಡುವ ಸದ್ದು ಕೇಳಿಸಿತು. ಬೀದಿಯಲ್ಲೇನೋ ಜಗಳವೆಂದು ಬಾಲ್ಕನಿಗೆ ಬಂದು ನಿಂತು ನೋಡಿದರೆ ಇವರ ಮನೆ ಮುಂದೆ ಜನ ಸೇರಿದ್ದಾರೆ. ಇವರಪ್ಪ ಕೋದಂಡಪಾಣಿ, 'ನಾನು ಮನೇಲಿ ಇಲ್ಲದ ಸಮಯ ನೋಡ್ಕೊಂಡು ಮನೇಲಿ ಕೈಯಿಗೆ ಸಿಕ್ಕ ಸಾಮಾನುಗಳನ್ನ ಆಟೋಗೆ ತುಂಬಿಸಿಕೊಂಡು ಬಂದು ಇಲ್ಲಿ ಬೇರೆ ಮನೆ ಮಾಡ್ಕೊಂಡು ಕೂತಿದೀಯ. ನೀನು ಮಕ್ಕಳ ತಲೇನೂ ಕೆಡಿಸಿದ್ದೀಯ. ಒಂದೂ ನೀನು ತುಂಬಿಕೊಂಡು ಬಂದ ಸಾಮಾನನ್ನೆಲ್ಲಾ ಹಿಂದಿರುಗಿ ಕೊಟ್ಟುಬಿಡು. ಇಲ್ಲಾ, ಅದರ ಬೆಲೆ ಎಷ್ಟೋ ಅಷ್ಟನ್ನ ಎಸಿ. ನಾನು ಕಷ್ಟಪಟ್ಟು ಸಂಪಾದಿಸಿದ ಹಣದಿಂದ ತಂದಿರೋ ಸಾಮಾನುಗಳು ಅವು. ನಾನೇ ಬೇಡ ಅಂದಮೇಲೆ ನನ್ನ ವಸ್ತುಗಳು ಯಾಕೆ ನಿಮಗೆ?' ಅಂತ ಕಿರುಚುತ್ತಿದ್ದ. ಸುನಂದಮ್ಮನೋರು ಕೂಡಾ ಅವನ ಸಮಕ್ಕೆ ದನಿ ಎತ್ತರಿಸಿ, 'ನೀನೆಲ್ಲಿ ಸಂಪಾದ್ನೆ ಮಾಡಿ ತಂದೆಯೋ ಮೂದೇವಿ. ನಾನು ನನ್ನ ತವರಿಂದ ತಂದ ವಸ್ತುಗಳು ಇವು. ನನ್ನ ತವರುಮನೆಯಿಂದ ತಂದ ವಸ್ತುಗಳನ್ನ ಮಾತ್ರ ಎತ್ಕೊಂಡು, ನೀನು ತಂದ ವಸ್ತುಗಳನ್ನ

